# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1212 |
| ಉತ್ತರಿಸಬೇಕಾದ ದಿನಾಂಕ | : | 18-03-2025 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೃಷಿಕರಿಗೆ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ನೆರವಾಗುವ ನಿಟ್ಟಿನಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ಮತ್ತು ಕನಿಷ್ಠ ಬಡ್ಡಿ ದರದಲ್ಲಿ ಬೆಳೆ ಸಾಲ ಸಹಿತ ಇತರ ಸೌಲಭ್ಯಗಳನ್ನು ನೀಡುವ ಕುರಿತು ಹೇಗೆ ಮಾಹಿತಿ ನೀಡಲಾಗುತ್ತಿದೆ; | ರಾಜ್ಯದಲ್ಲಿ ಕೃಷಿಕರಿಗೆ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ನೆರವಾಗುವ ನಿಟ್ಟಿನಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ಮತ್ತು ಕನಿಷ್ಠ ಬಡ್ಡಿ ದರದಲ್ಲಿ ಬೆಳೆ ಸಾಲ ಸಹಿತ ಇತರ ಸೌಲಭ್ಯಗಳನ್ನು ನೀಡುವ ಕುರಿತು ಈ ಕೆಳಕಂಡಂತೆ ಮಾಹಿತಿ ನೀಡಲಾಗುತ್ತಿದೆ.<br><br>1. ಸಹಕಾರ ಇಲಾಖೆಯ **'ಸಹಕಾರ ಸಿಂಧು'** ವೆಬ್‌ಸೈಟ್‌ನಲ್ಲಿ ಸರ್ಕಾರದ ಆದೇಶವನ್ನು ಪ್ರಚುರ ಪಡಿಸಲಾಗಿದೆ.<br><br>2. ಸರ್ಕಾರದಿಂದ ರಾಜ್ಯದಲ್ಲಿರುವ ಪ್ರತೀ ಡಿಸಿಸಿ ಬ್ಯಾಂಕಿಗೆ ಸಾಲ ವಿತರಿಸಬೇಕಾದ ಗುರಿ ನಿಗದಿಪಡಿಸಲಾಗಿದೆ.<br><br>3. ನಿಬಂಧಕರ ಕಛೇರಿಯಿಂದ ಸುತ್ತೋಲೆ ಹೊರಡಿಸಿ ಸರ್ಕಾರದ ಆದೇಶವನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಹಾಗೂ ಎಲ್ಲಾ ವರ್ಗದ ರೈತ ಸದಸ್ಯರಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತ ಸದಸ್ಯರಿಗೆ ಸಾಲದ ಅರ್ಜಿಗಳು ಸುಲಭವಾಗಿ ದೊರೆಯುವಂತೆ ಕ್ರಮ ಕೈಗೊಳ್ಳಲು ಮತ್ತು ಸಾಲದ ಅರ್ಜಿಗಳನ್ನು ಸ್ವೀಕರಿಸಿದ ಮತ್ತು ಸಾಲ ಮಂಜೂರಾದ ವಿವರಗಳನ್ನು ನಮೂದಿಸಲು ಪ್ರತ್ಯೇಕ ರಿಜಿಸ್ಟರ್‌ನ್ನು ಸಂಘಗಳ/ಬ್ಯಾಂಕುಗಳ ಮಟ್ಟದಲ್ಲಿ ನಿರ್ವಹಿಸಲು ಸೂಚಿಸಿದೆ.<br><br>4. ರಿಯಾಯಿತಿ ಬಡ್ಡಿ ದರದಲ್ಲಿ ಕೃಷಿ ಸಾಲ ವಿತರಿಸುವ ಯೋಜನೆಯಲ್ಲಿ ಸಹಕಾರ ಸಂಸ್ಥೆಗಳು ಪರಿಶಿಷ್ಟ ಜಾತಿ ಸದಸ್ಯರಿಗೆ ಶೇ.17.15 ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ ಶೇ.6.95 ರಷ್ಟು ಸಾಲ ವಿತರಿಸಲು ಅಥವಾ |

| | | |
|---|---|---|
| | | ಜಿಲ್ಲೆಯಲ್ಲಿ ಯಾವುದೇ ರೈತನು ಸಾಲ ಪಡೆಯಲು ಬಾಕಿ ಇರುವುದಿಲ್ಲ ಎಂದು ಸಹಕಾರ ಸಂಘಗಳು ದೃಢೀಕರಣ ಪತ್ರವನ್ನು ಸಹಕಾರ ಸಂಘಗಳ ಉಪ ನಿಬಂಧಕರಿಗೆ ಸಲ್ಲಿಸಲು, ಸಹಕಾರ ಸಂಘಗಳ ಉಪ ನಿಬಂಧಕರು ಈ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಂಡು ನಿಬಂಧಕರಿಗೆ ವರದಿಸಲು ಸರ್ಕಾರದಿಂದ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 30 ಬಿ ರಡಿ ನಿರ್ದೇಶನ ನೀಡಲಾಗಿದೆ. |
| ಆ) | ವಿವಿಧ ರೀತಿಯ ಕೃಷಿ ಪತ್ತಿನ ಸಹಕಾರ ಸಂಘಗಳು ಕೇವಲ ವಾರ್ಷಿಕ ಮಹಾಸಭೆ ಮತ್ತು ಚುನಾವಣಾ ನೋಟಿಸು ಹೊರತುಪಡಿಸಿ ಇತರ ಯಾವುದೇ ಸೌಲಭ್ಯ ಕುರಿತ ಪತ್ರ ವ್ಯವಹಾರವನ್ನು ಮತ್ತು ಪ್ರಚಾರವನ್ನು ಕೈಗೊಳ್ಳಲಾಗುತ್ತಿದೆಯೇ; ಯಾವುದೇ ವಿಶೇಷ ಕ್ಯಾಂಪ್‌ಗಳನ್ನು ಹಮ್ಮಿ ಕೊಳ್ಳಲಾಗುತ್ತಿದೆಯೇ; (ವಿವರ ನೀಡುವುದು) | ಕೃಷಿ ಪತ್ತಿನ ಸಹಕಾರ ಸಂಘಗಳು ಸರ್ಕಾರದ ವಿವಿಧ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಕರಪತ್ರಗಳನ್ನು ತಯಾರಿಸಿ ಸದಸ್ಯರುಗಳು / ಸಾರ್ವಜನಿಕರುಗಳಿಗೆ ವಿತರಿಸಲಾಗುತ್ತಿರುತ್ತವೆ.<br>ತಾಲ್ಲೂಕು ಮಟ್ಟದಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳ ಕಾರ್ಯದರ್ಶಿಗಳ ತ್ರೈಮಾಸಿಕ ಸಭೆ ಏರ್ಪಡಿಸಿ ಪ್ರಗತಿ ಪರಿಶೀಲನೆ ಮಾಡಿ ಕೃಷಿಕರಿಗೆ ಹೆಚ್ಚು ಸಾಲಗಳನ್ನು ನೀಡಲು ಹಾಗೂ ಸಾಲ ನೀಡುವ ದಾಖಲಾತಿಗಳಲ್ಲಿ ಸಮಸ್ಯೆ ಇದ್ದಲ್ಲಿ ಅದನ್ನು ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗುತ್ತಿದೆ. ಜೊತೆಗೆ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯನ್ನು ರೈತರಿಗೆ ತಲುಪಿಸಲು ಕಿಸಾನ್ ಕ್ರೆಡಿಟ್ ಕಾರ್ಡ್ ಅಭಿಯಾನವನ್ನು ಕೈಗೊಂಡಿರುತ್ತಾರೆ. |
| ಇ) | ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಹೆಚ್ಚು ಕಡಿಮೆ ಪ್ರತಿ ಗ್ರಾಮಗಳನ್ನು ಪ್ರತಿನಿಧಿಸುವ ಕೃಷಿ ಸಹಕಾರ ಸಂಘಗಳಿದ್ದು ಅದರ ಮೂಲಕ ಸಹಕಾರಿ ಮತ್ತು ಸರಕಾರಿ ಯೋಜನೆಗಳ ಪ್ರಚಾರ ಮತ್ತು ಅನುಷ್ಠಾನ ಮಾಡುವ ಬಗ್ಗೆ ಇಲಾಖೆ ಏನಾದರೂ ಹೊಸ ಯೋಚನೆ ಮಾಡಲಾಗಿದೆಯೇ; | ಇಲಾಖೆಯ ಮತ್ತು ಸರ್ಕಾರದ ಯೋಜನೆಗಳ ಮಾಹಿತಿಯನ್ನು ಪ್ರತಿ ವರ್ಷ ನಡೆಯುವ ರಾಜ್ಯ ಮಟ್ಟದ ಸಹಕಾರ ಸಪ್ತಾಹ ಕಾರ್ಯಕ್ರಮ ಹಾಗೂ ಪ್ರತಿ ತಾಲ್ಲೂಕಿನ ಸಹಕಾರ ಸಂಘಗಳಲ್ಲಿ ನಡೆಯುವ ತಾಲ್ಲೂಕು ಮಟ್ಟದ ಸಹಕಾರ ಸಪ್ತಾಹ ಕಾರ್ಯಕ್ರಮಗಳಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ನಡೆಯುವ ಸಹಕಾರ ಸಪ್ತಾಹ ಕಾರ್ಯಕ್ರಮಗಳಲ್ಲಿ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ. ವಿವಿಧ ಇಲಾಖೆಗಳಲ್ಲಿ ನಡೆಯುವ ವಸ್ತು ಪ್ರದರ್ಶನಗಳಲ್ಲಿ ಮತ್ತು ಕೃಷಿ ಮೇಳದಂತಹ ಕಾರ್ಯಕ್ರಮಗಳಲ್ಲಿಯೂ ಸಹ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. |
| ಈ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೃಷಿಕರ ಕೃಷಿ ಭೂಮಿಯ ದಾಖಲೆಗಳು ಕ್ಲುಪ್ತ | ಸರ್ಕಾರದ ಆದೇಶ ಮತ್ತು ನಿಬಂಧಕರ ಸುತ್ತೋಲೆಯ ನಿರ್ದೇಶನದಂತೆ Farmer Registration and Unified Beneficiary Information System (FRUITS) |

<table>
<tr>
<td></td>
<td>ಸಮಯದಲ್ಲಿ ಇಂದೀಕರಣವಾಗದ ಕಾರಣ ಹಾಗೂ ಕೃಷಿ ಪತ್ತಿನ ಸಹಕಾರಿ ಸಂಘಗಳ ಸಾಲ ನಿಯಮಗಳು ಕ್ಲಿಷ್ಟಕರವಾಗಿರುವ ಕಾರಣ ಜನರು ಹೆಚ್ಚು ಬಡ್ಡಿ ದರ ವಿಧಿಸುವ ಸ್ವ ಸಹಾಯ ಸಂಘ ಹಾಗೂ ಖಾಸಗಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳನ್ನು ಕಿರು ಸಾಲಕ್ಕಾಗಿ ಅವಲಂಬಿಸಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ತಂತ್ರಾಂಶದ ಮೂಲಕ ಕೃಷಿ ಸಾಲದ ವಿವರವನ್ನು ರೈತರ ಭೂಮಿ ದಾಖಲೆಗಳಲ್ಲಿ ದಾಖಲಿಸಿಕೊಂಡು, ಕೃಷಿ ಸಾಲ ವಿತರಿಸಬೇಕಾಗಿದ್ದು, ಅದಕ್ಕನುಗುಣವಾಗಿ Farmer Registration and Unified Beneficiary Information System (FRUITS) ತಂತ್ರಾಂಶದಲ್ಲಿ ದಾಖಲಿಸಿಕೊಂಡು ಕೃಷಿ ಸಾಲ ವಿತರಣೆಗೆ ಕ್ರಮವಹಿಸಲಾಗುತ್ತಿದೆ. ತಂತ್ರಾಂಶದಲ್ಲಿ ದಾಖಲಿಸಲು ಅಡಚಣೆ ಇದ್ದಲ್ಲಿ, ಸಂಬಂಧಪಟ್ಟ ಇಲಾಖೆಯೊಂದಿಗೆ ಸಮಾಲೋಚಿಸಿ ಸರಿಪಡಿಸಿ ಕೃಷಿ ಸಾಲ ವಿತರಣೆಗೆ ಕ್ರಮವಹಿಸಲಾಗುತ್ತಿದೆ. ತಂತ್ರಾಂಶದ ಅಡಚಣೆಯಿಂದ ಕೃಷಿ ಸಾಲ ವಿತರಣೆಯಾಗದೆ ಬಾಕಿ ಆಗಿರುವ ಬಗ್ಗೆ ವರದಿಯಾಗಿರುವುದಿಲ್ಲ.</td>
</tr>
<tr>
<td>ಉ)</td>
<td>ಕೃಷಿ ಪತ್ತಿನ ಸಹಕಾರ ಸಂಘಗಳು ಗ್ರಾಹಕರಿಗೆ ವಿವಿಧ ರೀತಿಯ ಸಾಲಗಳಿಗೆ ವಿಧಿಸುವ ಬಡ್ಡಿ ದರ ಎಷ್ಟು; ಅವು ಸ್ಥಳಿಯ ಸಾಮಾನ್ಯ ವಾಣಿಜ್ಯ ಬ್ಯಾಂಕುಗಳ ಬಡ್ಡಿಗಿಂತ ಹೆಚ್ಚಿಗೆ ಇದ್ದು ಅದನ್ನು ಪರಿಷ್ಕರಿಸುವ ಯೋಚನೆ ಇಲಾಖೆಗಿದೆಯೇ?</td>
<td>ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತ ಸದಸ್ಯರಿಗೆ ಮತ್ತು ಗ್ರಾಹಕರಿಗೆ ಅಲ್ಪಾವಧಿ ಬೆಳೆ ಸಾಲ (ಕೆ.ಸಿ.ಸಿ), ಮಧ್ಯಮಾವಧಿ ಮತು ದೀರ್ಘಾವಧಿ ಕೃಷಿ ಸಂಬಂಧಿತ ಸಾಲಗಳು, ಸ್ವ-ಸಹಾಯ ಗುಂಪುಗಳಿಗೆ, ವ್ಯವಸಾಯೇತರ ಸಾಲಗಳಾದ ಸಿ.ಸಿ.ಎಲ್, ವೈಯುಕ್ತಿಕ ಸಾಲ, ಚಿನ್ನಾಭರಣ ಸಾಲ, ಗೃಹ ನಿರ್ಮಾಣ ಸಾಲ, ಸ್ಥಿರಾಸ್ತಿ ಸಾಲ, ಮೀರಳತೆ ಸಾಲ, ವಾಹನ ಖರೀದಿ ಸಾಲ ಹಾಗೂ ಇತರೆ ಸಾಲಗಳನ್ನು ವಿವಿಧ ಬಡ್ಡಿದರದಲ್ಲಿ ವಿತರಿಸಲಾಗುತ್ತಿರುತ್ತದೆ. ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ಸಾಲದ ವಿಧಗಳು</th><th>ಬಡ್ಡಿ ಶೇಕಡಾ ದರದಲ್ಲಿ</th></tr>
<tr><td>1</td><td>ಅಲ್ಪಾವಧಿ ಬೆಳೆ ಸಾಲ, ಪಶುಸಂಗೋಪನೆ/ ಮೀನುಗಾರಿಕೆ ದುಡಿಯುವ ಬಂಡವಾಳ ಸಾಲ</td><td>ರೂ.5.00 ಲಕ್ಷಗಳವರೆಗೆ ಶೂನ್ಯ ಬಡ್ಡಿದರ</td></tr>
<tr><td>2</td><td>ಮಧ್ಯಮಾವಧಿ ಮತು ದೀರ್ಘಾವಧಿ ಕೃಷಿ ಸಂಬಂಧಿತ ಸಾಲಗಳು,</td><td>ರೂ.15.00 ಲಕ್ಷಗಳವರೆಗೆ ಶೇ.3 ಬಡ್ಡಿದರ</td></tr>
<tr><td>3</td><td>ಸ್ವ-ಸಹಾಯ ಗುಂಪುಗಳಿಗೆ ಸಾಲ</td><td>ಶೇ. 12 ರ ಬಡ್ಡಿದರ</td></tr>
<tr><td>4</td><td>ಚಿನ್ನಾಭರಣ ಸಾಲ</td><td>ಶೇ. 10.50-11.00 ರ ಬಡ್ಡಿದರ</td></tr>
<tr><td>5</td><td>ಉತ್ಪತ್ತಿ ಈಡಿನ ಸಾಲ</td><td>ಶೇ. 11-14ರ ಬಡ್ಡಿದರ</td></tr>
<tr><td>6</td><td>ವಾಹನ ಸಾಲ</td><td>ಶೇ. 12-13ರ ಬಡ್ಡಿದರ</td></tr>
</table>
</td>
</tr>
</table>

| | | |
|---|---|---|
| 7 | ಕೃಷಿಯೇತರ ಸಾಲ | ಶೇ. 13ರ ಬಡ್ಡಿದರ |
| 8 | ಸ್ಥಿರಾಸ್ತಿ ಅಡವಿನ ಸಾಲ | ಶೇ. 13ರ ಬಡ್ಡಿದರ |
| 9 | ಗೃಹ ನಿರ್ಮಾಣ ಸಾಲ | ಶೇ. 11.50–12ರ ಬಡ್ಡಿದರ |
| 10 | ವ್ಯವಹಾರ ಸಾಲ | ಶೇ. 13ರ ಬಡ್ಡಿದರ |
| 11 | ಕೃಷಿ ಭೂಮಿ ಖರೀದಿ | ಶೇ. 14ರ ಬಡ್ಡಿದರ |

ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 98–ಇ ರನ್ವಯ ಸಹಕಾರ ಸಂಘಗಳು ಬಡ್ಡಿ ದರವನ್ನು ನಿಗದಿಪಡಿಸಲು ಸ್ವತಂತ್ರವಾಗಿದ್ದು, ಅದನ್ನು ಪರಿಷ್ಕರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

**ಸಂಖ್ಯೆ: ಸಿಒ 88 ಸಿಎಲ್‌ಎಸ್ 2025**

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**